## ಅಧ್ಯಾಯ ೯
## ಶಿಕ್ಷಣ ಮತ್ತು ಕ್ರೀಡೆ

ಪ್ರಾಚೀನ ಕಾಲದಲ್ಲಿ ತಪೋವನಗಳಲ್ಲಿರುತ್ತಿದ್ದ ಋಷಿಮುನಿಗಳ ಆಶ್ರಮ ಗುರುಕುಲಗಳೇ ವಿದ್ಯಾಕೇಂದ್ರಗಳಾಗಿದ್ದು, ವೇದಾಧ್ಯಯನಕ್ಕೆ ಮೀಸಲಾಗಿದ್ದವು. ಗುರುಗಳಿಂದ ಶಿಷ್ಯರಿಗೆ ನೀಡಲ್ಪಡುತ್ತಿದ್ದ ವಿದ್ಯೆಯು ಮೌಖಿಕವಾಗಿರುತ್ತಿದ್ದು, ಅದು ಲಿಖಿತರೂಪಕ್ಕೆ ಇಳಿದಿದ್ದು ಬಹಳ ತಡವಾಗಿ. ವಿದ್ಯಾಕಾಂಕ್ಷಿಗಳು ಆಶ್ರಮ ಗುರುಕುಲಗಳಿಗೆ ಬಂದು ಗುರುಗಳ ಸೇವೆ ಮಾಡುತ್ತಾ ಅಪೇಕ್ಷಿತ ವಿದ್ಯೆಯನ್ನು ಪಡೆಯಬೇಕಾಗಿದ್ದು, ಇದಕ್ಕಾಗಿ ಅವರು ೧೨ ವರ್ಷ ಕಾಲ ಗುರುಕುಲದಲ್ಲಿ ತಂಗಬೇಕಾಗುತ್ತಿತ್ತು. ಗುರುಕುಲದಲ್ಲಿ ಆಧ್ಯಾತ್ಮ ವಿಚಾರಗಳ ಜೊತೆಗೆ ಲೌಕಿಕವೂ ವ್ಯವಹಾರಿಕವೂ ಆದ ಶಸ್ತ್ರಾಭ್ಯಾಸ, ಅಕ್ಷರಾಭ್ಯಾಸ, ಅಂಕಗಣಿತ, ಮುಂತಾದವುಗಳಿಗೂ ಒತ್ತು ನೀಡಲಾಗುತ್ತಿತ್ತು. ವೃತ್ತಿ ಶಿಕ್ಷಣವು ಕುಟುಂಬ ಮಟ್ಟದಲ್ಲಿ ಕುಲಕಸುಬಾಗಿ ಪರಂಪರಾಗತವಾಗಿ ಬೆಳೆದುಬಂದಿತ್ತು.

ಕ್ರಮೇಣ ಸಂಘರಾಮ, ಬೌದ್ಧವಿಹಾರ ಹಾಗೂ ದೇವಾಲಯಗಳಿಗೆ ಸೇರಿದ ಮಠಗಳು, ಜೈನಧರ್ಮೀಯರ ಬಸದಿ–ಮಠಗಳು, ಬ್ರಾಹ್ಮಣರಿಗೆ ಉಂಬಳಿಯಾಗಿ ನೀಡಲ್ಪಡುತ್ತಿದ್ದ ಅಗ್ರಹಾರಗಳು ನಗರಗಳಲ್ಲಿ ಬ್ರಾಹ್ಮಣರೇ ವಾಸಿಸುತ್ತಿದ್ದ ಬ್ರಹ್ಮಪುರಿಗಳು, ಶೈವರ ಶಿವಪುರಿಗಳು, ಶಿಕ್ಷಣ ಕೇಂದ್ರಗಳಾಗಿ ತಮ್ಮ ತಮ್ಮ ಧರ್ಮಕ್ಕೆ ಸಂಬಂಧಿಸಿದ ಉನ್ನತ ಶಿಕ್ಷಣವನ್ನು ನೀಡುತ್ತಿದ್ದವು. ದೇವಾಲಯ–ಮಠಗಳು ಬಾಲಶಿಕ್ಷೆ, ಬಾಲಬೋಧೆ, ಅಕ್ಷರಾಭ್ಯಾಸ, ಕಾಗುಣಿತ, ಅಂಕಗಣಿತ, ತೂಕ–ಅಳತೆ ಪ್ರಮಾಣ, ಹಣಕಾಸು ಲೆಕ್ಕಚಾರಗಳ ಕಲಿಕೆಗೆ ಮಾರ್ಗದರ್ಶನ ನೀಡುತ್ತಿದ್ದವು. ನಿದರ್ಶನಕ್ಕೆ ಅಯ್ಯನವರ ಶಾಲೆ, ಸಾಲಿಮಠ, ಕೂಲಿಮಠ, ಸಂಜೆಮಠ, ಮುಂತಾದವನ್ನು ಇಲ್ಲಿ ಉದಾಹರಿಸಬಹುದಾಗಿದೆ. ಮುಂದೆ ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಆಗಮನದೊಂದಿಗೆ ಮಸೀದಿಗಳಲ್ಲಿದ್ದ ಮಕ್ತಬಾ ಮದರಸಾಗಳಲ್ಲಿ ಇಸ್ಲಾಂ ಧರ್ಮೀಯರಿಗೆ ಧಾರ್ಮಿಕ ಶಿಕ್ಷಣ, ಇಗರ್ಜಿ ಕ್ರೈಸ್ತಮಠ ಹಾಗೂ ಕಾನ್ವೆಂಟ್‌ಗಳಲ್ಲಿ ಕ್ರೈಸ್ತ ಧರ್ಮೀಯರಿಗೆ ಧಾರ್ಮಿಕ ಶಿಕ್ಷಣ ನೀಡುವ ವ್ಯವಸ್ಥೆ ರೂಢಿಗೆ ಬಂದಿತು.



ಇದೇ ಪರಿಸ್ಥಿತಿ ಬಹುಹಿಂದಿನಿಂದಲೂ ನರಸೀಪುರ ತಾಲೂಕಿನಲ್ಲೂ ರೂಢಿಯಲ್ಲಿದ್ದುದ್ದಕ್ಕೆ ಹಲವಾರು ದಾಖಲೆಗಳಿವೆ. ಇಂದು ತಾಲೂಕು ಕೇಂದ್ರವಾಗಿರುವ ನರಸೀಪುರವು, ಹಿಂದೆ ಅಗ್ರಹಾರವಾಗಿದ್ದ ಅಂಶ ಹುಣಸೂರು ಹಾಗೂ ನರಸೀಪುರದ ಸುಮಾರು ೧೩–೧೬ನೆಯ ಶತಮಾನಕ್ಕೆ ಸೇರಿದ ಶಾಸನಗಳಿಂದ ವ್ಯಕ್ತವಾಗುತ್ತದೆ. ಗಂಗರ ರಾಜಧಾನಿಯಾಗಿ ಮೆರೆದಿರುವ ತಲಕಾಡು, ಹಿಂದೆ ಘಟಿಕಾ ಸ್ಥಾನವನ್ನು ಹೊಂದಿದ್ದಿರಬಹುದಾದರೂ ಅದಕ್ಕೆ ಪುರಾವೆಗಳಿಲ್ಲ. ಈ ಪ್ರದೇಶವು ಚೋಳರ ಆಡಳಿತಕ್ಕೆ ಒಳಪಟ್ಟಿದ್ದಾಗ ತಡಿಮಾಲಂಗಿಯೂ ಒಂದು ಅಗ್ರಹಾರವಾಗಿದ್ದು ಅದನ್ನು ಚೋಳ ಶಾಸನಗಳಲ್ಲಿ ಜನನಾಥಪುರವೆಂದೇ ಕರೆಯಲಾಗಿದೆ. ತಡಿಮಾಲಂಗಿಯ ೧೨೯೦ರ ಶಾಸನವೊಂದರಲ್ಲಿ ಬಾಲಶಿಕ್ಷೆಯ ಉಲ್ಲೇಖವಿದೆ. ಅಲ್ಲದೆ ಋಗ್ವೇದ ಬೋಧಿಸುವ ಉಪಾಧ್ಯಾಯರಿಗೆ, ದೇವನಾಗರಿ, ಕನ್ನಡ, ತಮಿಳು, (ತಿಗಳ) ಮರಾಠಿ ಭಾಷೆ ಬೋಧಿಸುವವರಿಗೆ ಉಂಬಳಿ ನೀಡಿದ ವಿವರವೂ ಇದೆ. ಬನ್ನೂರು, ಇನ್ನೊಂದು ಪ್ರಸಿದ್ಧ ಅಗ್ರಹಾರವಾಗಿದ್ದು ಸುಮಾರು ೧೧–೧೫ನೆಯ ಶತಮಾನದ ಶಾಸನಗಳಲ್ಲಿ ಜನನಾಥ ಚತುರ್ವೇದಿಮಂಗಲ, ಅನಾದಿ ಅಗ್ರಹಾರ ಶ್ರೀರಾಮಪುರ ಎಂದೇ ದಾಖಲಿಸಲ್ಪಟ್ಟಿದೆ. ಹೊಯ್ಸಳ ನರಸಿಂಹನ ಮಂತ್ರಿ ಸೋಮನಾಥ ದಂಡನಾಯಕನು ೧೨೬೮ರಲ್ಲಿ ನಿರ್ಮಿಸಿದ ಸರ್ವನಮಸ್ಯದ ಅಗ್ರಹಾರ "ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ"ವು ಪ್ರಮುಖ ಅಗ್ರಹಾರವಾಗಿ, ಧಾರ್ಮಿಕ ಕೇಂದ್ರವಾಗಿ, ವಿದ್ಯಾನಿಧಿಯಾಗಿ ಸುಮಾರು ಎರಡು ಶತಮಾನಗಳಷ್ಟು ಕಾಲ ವೈಭವದಿಂದ ಮೆರೆದರೂ ನಂತರದಲ್ಲಿ ಅವಸಾನದಂಚನ್ನು ತಲುಪಿದ್ದ ಅಂಶ ೧೪೯೭ರ ಸೋಮನಾಥಪುರ ಶಾಸನದಿಂದ ವೇದ್ಯವಾಗುತ್ತದೆ. ಅಲ್ಲದೆ ಆ ಸಂದರ್ಭದಲ್ಲಿ ಅಗ್ರಹಾರ ಸೋಮನಾಥಪುರವನ್ನು ಸಾಳುವ ನರಸಿಂಹನ ಆದೇಶದಂತೆ ಪುನರ್ ಜೀರ್ಣೋದ್ಧಾರ ಮಾಡಿದ ನಂಜರಾಜಒಡೆಯನು ಬೇವಿನಹಳ್ಳಿಯನ್ನು ಉಂಬಳಿ ಬಿಟ್ಟ ಅಂಶವನ್ನೂ ದಾಖಲಿಸಿದೆ. ಮಿಗಿಲಾಗಿ ಸೋಮನಾಥಪುರವು ಅಗ್ರಹಾರವಾಗಿ ಮುಂದುವರಿದ ಅಂಶ ಸೋಮನಾಥಪುರದ ೧೫೫೦ರ ಶಾಸನದಿಂದ ವ್ಯಕ್ತವಾಗುತ್ತದೆ. ಸುಮಾರು ೧೩ನೆಯ ಶತಮಾನಕ್ಕೆ ಸೇರಿದ ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಹುಣಸೂರು ಶಾಸನವೊಂದರಲ್ಲಿ ನರಸಿಂಹದೇವ ಚತುರ್ವೇದಿ ಮಂಗಲದ ಉಲ್ಲೇಖವಿದೆ. ನರಸೀಪುರದ ನೆರೆಯ ಗ್ರಾಮವಾದ ಆಲ್ಗೋಡು, ಸರ್ವನಮಸ್ಯದಗ್ರಹಾರ ದಕ್ಷಿಣ ವಾರಣಾಸಿ, ಸರ್ವಜ್ಞ ಪ್ರಸನ್ನ ಚನ್ನಕೇಶವಪುರ ಎಂಬ ಅಭಿದಾನವನ್ನು ಹೊಂದಿದ್ದು, ಪ್ರಸಿದ್ಧ ಅಗ್ರಹಾರವಾಗಿದ್ದ ಅಂಶ ನರಸೀಪುರದ ೧೨೯೦ರ ಶಾಸನದಿಂದ ಗೊತ್ತಾಗುತ್ತದೆ. ನರಸೀಪುರದ ೧೧೮೮ರ ಇನ್ನೊಂದು ಶಾಸನದಿಂದ ನೆರೆಯ ಹುಣಸೂರು (ಶಾಸನೋಕ್ತ ಪುಣಿಸೆಯೂರು) ಗ್ರಾಮಕ್ಕೆ ಶ್ರೀರಾಮದೇವ ಚತುರ್ವೇದಿಮಂಗಲ ಎಂಬ ಅಭಿದಾನವಿದ್ದ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೇ ಚೋಳರ ಕಾಲದಲ್ಲಿ ಆಲ್ಗೋಡಿಗೆ ಕುಲೋತ್ತುಂಗಪುರವೆಂದು ಕರೆಯಲಾಗುತ್ತಿದ್ದ ಅಂಶ ಈ ಶಾಸನದಿಂದ ಗೊತ್ತಾಗುತ್ತದೆ.

ವಿಜಯನಗರದರಸ ಕೃಷ್ಣದೇವರಾಯನ ಕಾಲದ ೧೫೧೯ರ ಮಾದಾಪುರ ಹಾಗೂ ೧೫೨೮ರ ಮರಡಿಪುರ ಶಾಸನಗಳಿಂದ ಸಾಳುವ ಗೋವಿಂದರಾಜನು ಉಮ್ಮತ್ತೂರನ್ನು ನಂಜಯ್ಯಅರಸರಿಗೂ ಹಾಗೂ ಬ್ರಾಹ್ಮಣರಿಗೆ ಮರಡಿಪುರ ಮಾದಾಪುರ ಗ್ರಾಮಗಳೆರಡನ್ನೂ ಒಗ್ಗೂಡಿಸಿ ಕೃಷ್ಣರಾಯಪುರ ಎಂಬ ಅಭಿದಾನವನ್ನು ನೀಡಿ ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಸುಮಾರು ೧೬ನೆಯ ಶತಮಾನಕ್ಕೆ ಸೇರಿದ ಕಲಿಯೂರಿನ ಶಾಸನದಿಂದ ಕಲಿಯೂರಿಗೆ 'ಕೃಷ್ಣದೇವರಾಯಪುರ' ಎಂಬ ಅಭಿಧಾನವಿದ್ದ ಅಂಶ ಗೊತ್ತಾಗುತ್ತದೆ. ಮೈಸೂರು ಅರಸರ ಕಾಲದಲ್ಲಿ ಅಗ್ರಹಾರ ನಿರ್ಮಾಣ ಕಾರ್ಯ ಮುಂದುವರಿಯಿತು. ತಿ.ನರಸೀಪುರದ ೧೬೨೨ರ ಶಾಸನದಿಂದ ಚಾಮರಾಜ ಒಡೆಯರು, ಅಜ್ಜ ರಾಜ ಒಡೆಯರ ಆಶಯದಂತೆ, ನವಿಲೂರು–ಆಲದೂರು ಗ್ರಾಮಗಳನ್ನು ಒಗ್ಗೂಡಿಸಿ, ಅಗ್ರಹಾರವನ್ನಾಗಿ ಮಾರ್ಪಡಿಸಿ, ಚಾಮರಾಜ ಸಮುದ್ರವೆಂದು ಹೆಸರಿಟ್ಟು ೪೧ ವೃತ್ತಿಗಳನ್ನಾಗಿ ವಿಭಜಿಸಿ, ಒಂದು ವೃತ್ತಿಯನ್ನು ಗುಂಜಾ ನರಸಿಂಹಸ್ವಾಮಿಗೆ ಅರ್ಪಿಸಿ ಉಳಿದ ೪೦ ವೃತ್ತಿಗಳನ್ನು ೩೩ ಬ್ರಾಹ್ಮಣರಿಗೆ ದಾನ ನೀಡಿದ ಅಂಶ ಗೊತ್ತಾಗುತ್ತದೆ. ನೆರೆಯ ಸೋಸಲೆಯೂ ಅಗ್ರಹಾರವಾಗಿದ್ದ ಅಂಶ ಮೈಸೂರು ಅರಸರ ಕಾಲದ ಶಾಸನದಿಂದ ವೇದ್ಯವಾಗುತ್ತದೆ.

ಹೈದರ್–ಟಿಪ್ಪು ಆಡಳಿತದಲ್ಲಿ ಮುಸ್ಲಿಂ ಶಿಕ್ಷಣಕ್ಕೆ ಹೆಚ್ಚು ಗಮನ ನೀಡಲಾಯಿತು. ಅದರಲ್ಲೂ ಟಿಪ್ಪು ಮುಖ್ಯ ಪಟ್ಟಣಗಳಲ್ಲಿ ಮಸೀದಿ ನಿರ್ಮಿಸಿ, ಧರ್ಮಬೋಧನೆಗೆ ಮೌಲ್ವಿಗಳನ್ನು ನೇಮಿಸುತ್ತಿದ್ದು, ಮದ್ರಾಸಾಗಳಲ್ಲಿ ಅರಬೀಕ್ ಲಿಪಿ, ಉರ್ದು ಭಾಷೆಗಳನ್ನು ಕಲಿಸಲಾಗುತ್ತಿತ್ತೆಂದು ಇತಿಹಾಸಕಾರ ಕಿರ್ಮಾನಿ ದಾಖಲಿಸಿದ್ದಾನೆ. ಆ ಪ್ರಕಾರ ತಾಲೂಕಿನ ಗರ್ಗೇಶ್ವರಿ, ಬನ್ನೂರು, ತಲಕಾಡುಗಳಲ್ಲಿ ಮಸೀದಿಗಳು ಟಿಪ್ಪು ಕಾಲದಲ್ಲಿ ನಿರ್ಮಾಣಗೊಂಡಿರಬಹುದೆಂದು ತರ್ಕಿಸಬಹುದಾಗಿದೆ.

೧೮೬೮ರಲ್ಲಿ ಹೋಬಳಿ ಶಾಲಾ ಪದ್ಧತಿಯನ್ನು ಆರಂಭಿಸುವ ಮೂಲಕ ಹೋಬಳಿಗೊಂದು ಕಿರಿಯ ಪ್ರಾಥಮಿಕ ಶಾಲೆಯನ್ನು ತೆರೆಯಲು ಮುಂದಾದುದು ಮಹತ್ವದ ನಿಲುವಾಗಿತ್ತು. ಇದೇ ರೀತಿ ತಾಲೂಕಿಗೊಂದು ಹಿರಿಯ ಪ್ರಾಥಮಿಕ ಶಾಲೆ, ಜಿಲ್ಲಾ ಕೇಂದ್ರದಲ್ಲಿ ಪ್ರೌಢಶಾಲೆಗಳು ಆರಂಭಗೊಂಡವು. ಅದರಂತೆ ತಾಲೂಕಿನ ತಲಕಾಡು, ತಾಯೂರು, ಸೋಸಲೆ, ಪೂರಿಗಾಲಿ ಹೋಬಳಿ ಕೇಂದ್ರಗಳಲ್ಲಿ ಕಿರಿಯ ಶಾಲೆ ಹಾಗೂ ತಾಲೂಕು ಕೇಂದ್ರ ತಲಕಾಡಿನಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳು ಆರಂಭವಾದವು. ಮುಂದೆ ೧೮೮೨ರಲ್ಲಿ ಬನ್ನೂರು ಹಾಗೂ ಬೇವಿನಹಳ್ಳಿ ಹೋಬಳಿಗಳೂ ಈ ತಾಲೂಕಿಗೆ ವರ್ಗಾವಣೆಗೊಂಡು ತಾಯೂರು ಹೋಬಳಿ ನಂಜನಗೂಡು ತಾಲೂಕಿಗೆ ಹಸ್ತಾಂತರಗೊಂಡಾಗ ತಾಲೂಕಿನಲ್ಲಿದ್ದ ಹೋಬಳಿ ಶಾಲೆಗಳ ಸಂಖ್ಯೆ ಐದಕ್ಕೇರಿತು.

## ಸಾಕ್ಷರತೆ

೧೯೪೧ರ ಜನಗಣತಿಯಂತೆ ತಾಲೂಕಿನಲ್ಲಿ ೪೩೭ ಪುರುಷರು ಹಾಗೂ ೮೪೫ ಮಹಿಳೆಯರು ಮಾತ್ರ ಸಾಕ್ಷರತೆ ಹೊಂದಿದವರಾಗಿದ್ದರು. ೧೯೭೧ರ ಜನಗಣತಿಯ



ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ (೦–೬ ವಯೋಮಿತಿಯವರನ್ನು ಹೊರತುಪಡಿಸಿ) ಶೇ. ೨೬.೪ ಪುರುಷರು ಹಾಗೂ ಶೇ. ೧೧.೭ ಮಹಿಳೆಯರು ಅಕ್ಷರಸ್ಥರಾಗಿದ್ದು, ತಾಲೂಕಿನ ಸರಾಸರಿ ಸಾಕ್ಷರತಾ ಪ್ರಮಾಣ ಶೇ. ೧೯.೩ ಆಗಿತ್ತು. ಇದು ೧೯೮೧ರ ಜನಗಣತಿಯ ವೇಳೆಗೆ ಕ್ರಮವಾಗಿ ಶೇ. ೩೧.೭೪, ಶೇ. ೧೯.೯೬ ಹಾಗೂ ಶೇ. ೨೪.೫೫ಕ್ಕೆ ಏರಿತ್ತು. ಈ ಅವಧಿಯಲ್ಲಿ ಶೇ. ೫.೨೫ ರಷ್ಟು ಪ್ರಗತಿಯನ್ನು ಸಾಧಿಸಲಾಗಿತ್ತು. ಇದು ೧೯೯೧ರ ಜನಗಣತಿಯ ವೇಳೆಗೆ ಕ್ರಮವಾಗಿ ಶೇ. ೪೬.೫೩, ಶೇ. ೩೦.೩೭, ಹಾಗೂ ಶೇ. ೩೮.೬೭ಕ್ಕೆ ಏರುವ ಮೂಲಕ ಆ ದಶಕದಲ್ಲಿ ಸುಮಾರು ಶೇ. ೧೫ ರಷ್ಟು ಪ್ರಗತಿಯನ್ನು ಸಾಧಿಸಿತ್ತಾದರೂ, ಜಿಲ್ಲಾ ಮಟ್ಟದ ಸರಾಸರಿ ಸಾಕ್ಷರತಾ ಪ್ರಮಾಣವಾದ ಶೇ. ೪೫.೧೬ ಕ್ಕಿಂತ ಕಡಿಮೆ ಇತ್ತು. ಅದೇ ೨೦೦೧ರ ಜನಗಣತಿಯ ವೇಳೆಗೆ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ೭೬,೮೩೩ (ಶೇ. ೬೦.೯೧) ಪುರುಷರು, ೫೭,೪೫೫ (ಶೇ. ೪೭.೫೪) ಮಹಿಳೆಯರು ಸಾಕ್ಷರಸ್ಥರಾಗಿದ್ದು, ತಾಲೂಕಿನ ಸರಾಸರಿ ಸಾಕ್ಷರತಾ ಪ್ರಮಾಣವು ಶೇ. ೫೪.೩೭ ಕ್ಕೇರಿತಾದರೂ ಜಿಲ್ಲಾ ಮಟ್ಟದ ಸರಾಸರಿ ಪ್ರಮಾಣ (ಶೇ. ೬೩,೬೯) ಕ್ಕಿಂತ ಕಡಿಮೆ ಇದ್ದು, ಐದನೆಯ ಸ್ಥಾನದಲ್ಲಿತ್ತು. ೨೦೦೧ರ ಗಣತಿಯನ್ವಯ ಗ್ರಾಮೀಣ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ೬೫,೯೯೨ (ಶೇ. ೫೯.೧೨) ಪುರುಷರು, ೪೮,೩೩೩ (ಶೇ. ೪೫.೪೭) ಮಹಿಳೆಯರು ಸಾಕ್ಷರಸ್ಥರಾಗಿದ್ದು, ತಾಲೂಕಿನ ಗ್ರಾಮೀಣ ಜನಸಂಖ್ಯೆಯ ಸರಾಸರಿ ಸಾಕ್ಷರತಾ ಪ್ರಮಾಣವು ಶೇ. ೫೨.೪೫ ಆಗಿತ್ತು. ಇದು ಜಿಲ್ಲಾ ಮಟ್ಟದ ಸರಾಸರಿ ಸಾಕ್ಷರತಾ ಪ್ರಮಾಣ (ಶೇ. ೫೨.೪೫)ಕ್ಕೆ ಸರಿಸುಮಾರು ಸಮನಾಗಿತ್ತು. ಆದರೆ ಇದೇ ಸಂದರ್ಭದಲ್ಲಿ ತಾಲೂಕಿನ ನಗರ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ೧೧,೦೪೧ (ಶೇ. ೭೪.೨೯) ಪುರುಷರು, ೯,೧೨೨ (ಶೇ. ೬೨.೬೧) ಮಹಿಳೆಯರು ಸಾಕ್ಷರಸ್ಥರಾಗಿದ್ದು, ತಾಲೂಕಿನ ನಗರ ಜನಸಂಖ್ಯೆಯ ಸರಾಸರಿ ಸಾಕ್ಷರತಾ ಪ್ರಮಾಣವು ಶೇ. ೬೮.೫೧ ಆಗಿತ್ತು. ಇದು ಜಿಲ್ಲಾ ಮಟ್ಟದ ಸರಾಸರಿ ನಗರ ಸಾಕ್ಷರತಾ ಪ್ರಮಾಣ (ಶೇ. ೮೨.೪೮) ಕ್ಕಿಂತ ಕಡಿಮೆ ಇದ್ದಿತು.

**ಪೂರ್ವ ಪ್ರಾಥಮಿಕ (ನರ್ಸರಿ) ಶಿಕ್ಷಣ :** ಇದು ಇತ್ತೀಚಿನ ಪರಿಕಲ್ಪನೆಯಾದರೂ ಜಿಲ್ಲೆಯ ಪ್ರಥಮ ನರ್ಸರಿ ಶಾಲೆಯು ೧೯೩೦ರಷ್ಟು ಹಿಂದೆಯೇ ಮೈಸೂರಿನಲ್ಲಿ ಆರಂಭವಾಗಿತ್ತು. ನರ್ಸರಿ ಶಾಲೆಗಳಿಗೆ ಸಂಬಂಧಿಸಿದಂತೆ, ೧೯೩೬ರಲ್ಲಿ ಸರ್ಕಾರವು ಆಯೋಗವೊಂದನ್ನು ರಚಿಸಿತು. ನರ್ಸರಿ ಶಿಕ್ಷಣಕ್ಕೆ ಹೆಚ್ಚು ಒಲವು ಕಂಡು ಬಂದು ನರ್ಸರಿ ಶಿಕ್ಷಕರಿಗೆ ಔಪಚಾರಿಕ ತರಬೇತಿಯನ್ನು ನೀಡಲಾಯಿತು. ಎರಡು ಹಾಗೂ ಮೂರನೆಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ನರ್ಸರಿ (ಬಾಲವಾಡಿ) (ಇನ್‌ಫ್ಯಾಂಟ್) ಶಾಲೆಗಳನ್ನು (ಪ್ರಾಥಮಿಕ ಪೂರ್ವ) ಆರಂಭಿಸಲು ಆರ್ಥಿಕ ನೆರವು ನೀಡಲಾಯಿತು. ಏತನ್ಮಧ್ಯೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮಹಿಳೆಯರಿಗಾಗಿ ಮಹಿಳಾ ಕಲ್ಯಾಣ ಕೇಂದ್ರಗಳನ್ನು ಗ್ರಾಮೀಣ ಪ್ರದೇಶದಲ್ಲಿ ಆರಂಭಿಸಲಾಯಿತು. ಅಲ್ಲದೇ ನರ್ಸರಿ ಶಾಲೆಗಳ ಆರಂಭಕ್ಕೆ ಗ್ರಾಮೀಣ ಭಾಗದಲ್ಲಿ ೭೦ ಶೇ. ಅನುದಾನ ಹಾಗೂ ನಗರ ಪ್ರದೇಶದಲ್ಲಿ ೫೦ ಶೇ. ಅನುದಾನವನ್ನು ನೀಡಲು ಸರ್ಕಾರ ಮುಂದಾಯಿತು. ತತ್ಪರಿಣಾಮವಾಗಿ

೧೯೮೪ರಲ್ಲಿ ತಾಲೂಕಿನಲ್ಲಿ ಕೇವಲ ಏಳು ಮಾತ್ರವಿದ್ದ ಇವು ೧೯೮೭ರ ವೇಳೆಗೆ ೧೬ಕ್ಕೇರಿ ಒಟ್ಟು ೯೬೦ ಮಕ್ಕಳ ಹಾಜರಾತಿ ಇತ್ತು. ೧೯೯೨ರ ವೇಳೆಗೆ ಶಿಶುವಿಹಾರಗಳ ಸಂಖ್ಯೆ ೩೩ಕ್ಕೇರಿ ೧೫೮೦ ಮಕ್ಕಳ ಹಾಜರಾತಿ ಇತ್ತು. ೧೯೯೩ರ ಅಂತ್ಯಕ್ಕೆ ಈ ಸಂಖ್ಯೆಯಲ್ಲಿ ಗಮನಾರ್ಹ ಬದಲಾವಣೆ (೩೪) ಆಗದಿದ್ದರೂ, ೩,೪೩೬ ಮಕ್ಕಳು ನೋಂದಣಿಗೊಂಡಿದ್ದುದು ಗಮನಾರ್ಹವಾಗಿತ್ತು. ಆದರೆ ೧೯೯೪ರಲ್ಲಿ ೧೯ಕ್ಕೆ ಇಳಿದ ನರ್ಸರಿ ಶಾಲೆಗಳ ಸಂಖ್ಯೆ ೧೯೯೮ರವರೆಗೆ ಹಾಗೆಯೇ ಮುಂದುವರಿದರೂ ಮಕ್ಕಳ ಹಾಜರಾತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಅಂಗನವಾಡಿಗಳು ಅಧಿಕಗೊಳ್ಳುವುದರೊಂದಿಗೆ ಶಿಶುವಿಹಾರ ನರ್ಸರಿ ಶಿಕ್ಷಣ ಕೇಂದ್ರಗಳು ಕ್ಷೀಣಿಸಲಾರಂಭಿಸಿ, ಶಾಲಾಮಾತೆಯರನ್ನು ಇಂದು ಪ್ರಾಥಮಿಕ ಶಾಲೆಗಳಿಗೆ ವರ್ಗಾಯಿಸಲಾಗಿದೆ.

**ಅಂಗನವಾಡಿ ಕೇಂದ್ರಗಳು:** ೧೮೯೦–೯೧ರ ವೇಳೆಗೆ ಈ ಬಗೆಯ ೩೩೧ ದೇಶೀಯ ಶಾಲೆಗಳು ಮೈಸೂರು ಜಿಲ್ಲೆಯಲ್ಲಿತ್ತೆಂದು ತಿಳಿದು ಬರುತ್ತದೆ. ಇವುಗಳಲ್ಲಿ ಕೆಲವಾದರೂ ನರಸೀಪುರ ತಾಲೂಕಿನ ಬನ್ನೂರು, ತಲಕಾಡು, ಸೋಮನಾಥಪುರ, ಸೋಸಲೆ, ಮೂಗೂರು, ನರಸೀಪುರ ಮುಂತಾದೆಡೆಗಳಲ್ಲಿದ್ದವೆಂದು ತಿಳಿದುಬರುತ್ತದೆ. ಆದರೆ ಕ್ರಮೇಣ ಇವು ಕಣ್ಮರೆಯಾಗಿ ಆಧುನಿಕ ಶಿಕ್ಷಣ ಪದ್ಧತಿಯು ಜಾರಿಗೆ ಬಂದಿತು. ಆರು ವರ್ಷ ವಯೋಮಿತಿಯ ಮಕ್ಕಳಿಗಾಗಿ ಶಾಲಾಪೂರ್ವ ಚಟುವಟಿಕೆ ಕೇಂದ್ರಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸಮಗ್ರ ಬಾಲವಿಕಾಸ ಯೋಜನೆಯಡಿ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಆರಂಭಿಸಲು ಸರ್ಕಾರವು ೧೯೭೫–೭೬ರಲ್ಲಿ ಮುಂದಾಯಿತು. ಅದರಂತೆ ಆಯ್ದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಕಾರ್ಯಕರ್ತೆಯರಿಂದ ನಿರ್ವಹಿಸಲ್ಪಡುವ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಯಿತು. ಈ ಕೇಂದ್ರಗಳ ಮೂಲಕ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವುದರ ಬಗ್ಗೆ ತಾಯಂದಿರಿಗೆ ಅರಿವು ಮೂಡಿಸುವಿಕೆ; ಗರ್ಭಿಣಿ ಹಾಗೂ ಅಶಕ್ತ ಸ್ತ್ರೀಯರಿಗೆ ಪೌಷ್ಟಿಕ ಆಹಾರ ವಿತರಣೆ ಮಹಿಳೆ ಮತ್ತು ಮಕ್ಕಳಿಗೆ ಆರೋಗ್ಯ ಔಷಧೋಪಚಾರದಂತಹ ಸಾಮಾಜಿಕ ಸೇವೆ ನೀಡುವುದರ ಜೊತೆಗೆ ಪ್ರಾಥಮಿಕ ಪೂರ್ವಹಂತದ ಮಕ್ಕಳಿಗೆ ಶಿಕ್ಷಣವನ್ನು ನೀಡಲೂ ಉದ್ದೇಶಿಸಲಾಗಿತ್ತು. ಕೇಂದ್ರ ಅನುದಾನಿತ ಸಮಗ್ರ ಬಾಲವಿಕಾಸ ಯೋಜನೆಯನ್ನು ೧೯೭೫–೭೬ರಲ್ಲಿ ಪ್ರಯೋಗಾರ್ಥವಾಗಿ ಜಿಲ್ಲೆಯ ನರಸೀಪುರ ತಾಲೂಕಿನಲ್ಲಿ ಮೊದಲ ಬಾರಿಗೆ ಜಾರಿಗೊಳಿಸಲಾಯಿತು. ಆನಂತರ ಇದನ್ನು ಕ್ರಮೇಣ ರಾಜ್ಯದ ಇತರೆಡೆಗಳಿಗೂ ವಿಸ್ತರಿಸಲಾಯಿತು. ಏತನ್ಮಧ್ಯೆ ೧೯೮೨ರಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಟೈಫಂಡ್‌ನೊಂದಿಗೆ ನಾಲ್ಕು ತಿಂಗಳ ತರಬೇತಿ ನೀಡುವ ವ್ಯವಸ್ಥೆಯನ್ನೂ ಆರಂಭಿಸಲಾಯಿತು. ಆರಂಭಿಕ ವರ್ಷದಲ್ಲಿ (೧೯೭೫) ತಾಲೂಕಿನಲ್ಲಿ ಆರಂಭಗೊಂಡ ೯೬ ಅಂಗನವಾಡಿ ಕೇಂದ್ರಗಳಿಂದ ೨೮೦೦ ಮಹಿಳೆಯರಿಗೆ ಹಾಗೂ ೬,೮೦೦ ಮಕ್ಕಳಿಗೆ ಪ್ರಯೋಜನವಾಗಿತ್ತು. ಮುಂದೆ ೧೯೮೬ರ ವೇಳೆಗೆ ತಾಲೂಕಿನಲ್ಲಿ ೨೨೦ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ೧೯೮೫–೮೬ರ ಸಾಲಿನಲ್ಲಿ ೨,೭೮೭ ಮಹಿಳೆಯರಿಗೆ ಹಾಗೂ ೧೭,೬೧೪ ಮಕ್ಕಳಿಗೆ ಈ ಕೇಂದ್ರಗಳಿಂದ



ಪ್ರಯೋಜನವಾಗಿತ್ತು. ಅಲ್ಲದೇ ೧೯೯೦ರಲ್ಲಿ ತಾಲೂಕಿನಲ್ಲಿ ೨೨೦ ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿದ್ದು, ೧೯೯೮ರ ಅಂತ್ಯಕ್ಕೆ ಅಂಗನವಾಡಿ ಕೇಂದ್ರಗಳ ಸಂಖ್ಯೆ ೨೪೨ಕ್ಕೆ ಏರಿದ್ದು, ೨೦೦೯ರ ಮಾರ್ಚ್ ಅಂತ್ಯಕ್ಕೆ ಅಂಗನವಾಡಿಗಳ ಸಂಖ್ಯೆ ೩೦೫ಕ್ಕೆ ಏರಿತ್ತು.

**ಪ್ರಾಥಮಿಕ ಶಿಕ್ಷಣ:** ಸಂಸ್ಥಾನದಲ್ಲಿ ಹೋಬಳಿ ಮಟ್ಟದಲ್ಲಿ ಪ್ರಾಥಮಿಕ ಶಾಲೆಗಳನ್ನು ಆರಂಭಿಸುವುದರೊಂದಿಗೆ ಪ್ರಾಥಮಿಕ ಶಿಕ್ಷಣವು ೧೮೬೬ರಿಂದ ಸಾಕಷ್ಟು ಮಹತ್ವ ಪಡೆಯಲಾರಂಭಿಸಿತು. ಅದರಂತೆ ಹೋಬಳಿಗೊಂದರಂತೆ ಇಲ್ಲವೇ ಸರಾಸರಿ ೪೧ ಚ.ಮೈ. ವಿಸ್ತೀರ್ಣಕ್ಕೆ ಒಂದರಂತೆ ಪ್ರಾಥಮಿಕ ಶಾಲೆಗಳನ್ನು ತಾಲೂಕಿನ ತಲಕಾಡು, ತಾಯೂರು, ಪೂರಿಗಾಲಿ ಹಾಗೂ ಸೊಸಲೆಗಳಲ್ಲಿ ತೆರೆಯಲಾಯಿತು. ಈ ಶಾಲೆಗಳಲ್ಲಿ ಬೋಧಿಸುತ್ತಿದ್ದ ಶಿಕ್ಷಕರಿಗೆ ಏಳು ರೂ.ಗಳ ಮಾಸಿಕ ವೇತನವನ್ನು ನೀಡಲಾಗುತ್ತಿದ್ದು, ಹಗಲಲ್ಲಿ ಶಾಲೆಗೆ ಬರಲಾಗದಿದ್ದ ವಿದ್ಯಾರ್ಥಿಗಳಿಗೆಂದೇ ತರಗತಿಗಳನ್ನು ರಾತ್ರಿಯಲ್ಲಿ ನಡೆಸಲಾಗುತ್ತಿದ್ದು, ದೀಪದ ವೆಚ್ಚಕ್ಕಾಗಿ ಅವರಿಂದ ಶುಲ್ಕ ಪಡೆಯಲಾಗುತ್ತಿತ್ತು. ಏತನ್ಮಧ್ಯೆ ತಾಲೂಕಿನಲ್ಲಿದ್ದ ಹೋಬಳಿ ಶಾಲೆಗಳ ಸಂಖ್ಯೆ ೧೮೮೨ರ ವೇಳೆಗೆ ಐದಕ್ಕೇರಿದವು. ಆದರೆ ಮುಂದೆ ೧೮೮೬ರಲ್ಲಿ ಪೂರಿಗಾಲಿ ಹೋಬಳಿಯನ್ನು ನೆರೆಯ ಮಳವಳ್ಳಿ ತಾಲೂಕಿಗೆ ವರ್ಗಾಯಿಸಿದಾಗ ಶಾಲೆಗಳ ಸಂಖ್ಯೆ ಮತ್ತೆ ನಾಲ್ಕಕ್ಕೆ ಇಳಿಯಿತು. ಏತನ್ಮಧ್ಯೆ ದೇಶಿಭಾಷೆಯ ವಿದ್ಯಾರ್ಥಿಗಳಿಗೆ ಮೈಸೂರು ಲೋಕಲ್ ಪರೀಕ್ಷೆಯನ್ನು ೧೮೮೮ರಲ್ಲಿ ಆರಂಭಿಸಲಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿಗದಿತ ಶುಲ್ಕ ವ್ಯವಸ್ಥೆಯನ್ನು ೧೮೯೪ರಲ್ಲಿ ಜಾರಿಗೊಳಿಸಲಾಯಿತು. ಮುಂದೆ ೧೯೦೪ರಲ್ಲಿ ಅದನ್ನು ಪರಿಷ್ಕರಿಸಲಾಯಿತು. ಅದರಂತೆ ತಾಲೂಕು ಶಾಲೆಗಳಲ್ಲಿ (ಕನ್ನಡ ಮತ್ತು ಉರ್ದು) ಕಿರಿಯ ಪ್ರಾಥಮಿಕ (ಒಂದನೆ) ತರಗತಿಗೆ ಎರಡು ಆಣೆ, ಉನ್ನತ ಪ್ರಾಥಮಿಕ (ಎರಡು ಮತ್ತು ಮೂರು) ತರಗತಿಗಳಿಗೆ ಮೂರು ಆಣೆ, ಮಾಧ್ಯಮಿಕ ಶಾಲೆ ತರಗತಿ (ನಾಲ್ಕು ಮತ್ತು ಐದು)ಗಳಿಗೆ ಐದು ಆಣೆ ಶಿಕ್ಷಣ ಶುಲ್ಕವನ್ನು ವಿಧಿಸಲಾಗುತ್ತಿದ್ದು, ಗ್ರಾಮೀಣ ಹಾಗೂ ಶಾಖಾ ಶಾಲೆಗಳಲ್ಲಿ ಮೊದಲ ವರ್ಗದ ತರಗತಿಗೆ ಉಚಿತ ಪ್ರವೇಶವಿದ್ದು, ಉನ್ನತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಕ್ರಮವಾಗಿ ಒಂದು ಹಾಗೂ ಎರಡು ಆಣೆ ಶುಲ್ಕವನ್ನು ವಿಧಿಸಲಾಗಿತ್ತು. ಬೋಧನೆಯು ಸಾಮಾನ್ಯವಾಗಿ ಕನ್ನಡವಾಗಿದ್ದು, ಭೂಗೋಳವನ್ನೂ ಕಲಿಸಲಾಗುತ್ತಿತ್ತು.

ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಐದು ವರ್ಷ ಹತ್ತು ತಿಂಗಳಿನಿಂದ – ಏಳು ವರ್ಷ ವಯೋಮಿತಿಯ ಮಕ್ಕಳಿಗೆ ಮೈಸೂರು ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ವಯ ೧೯೧೩ರಲ್ಲಿ ಜಾರಿಗೊಳಿಸಲಾಯಿತು. ಮುಂದೆ ಅದನ್ನು ೧೦ ವರ್ಷಗಳಿಗೆ ಹೆಚ್ಚಿಸಲಾಯಿತು. ಪ್ರಾಥಮಿಕ ಶಿಕ್ಷಣವು ಅತ್ಯಗತ್ಯವೆಂಬುದನ್ನು ಮನಗಂಡ ಸರ್ಕಾರ, ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಶುಲ್ಕವನ್ನು ೧೯೧೯ರಲ್ಲಿ ರದ್ದುಗೊಳಿಸಿ ಉಚಿತ ಶಿಕ್ಷಣಕ್ಕೆ ಮುಂದಾಯಿತು. ಪ್ರಾಥಮಿಕ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳಿಂದ ಪ್ರತ್ಯೇಕಿಸಿ, ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ–ನಾಲ್ಕನೆ ತರಗತಿವರೆಗೆ ಮಾಧ್ಯಮಿಕ ಶಾಲೆಗಳಲ್ಲಿ

ಐದರಿಂದ ಎಂಟನೆಯ ತರಗತಿವರೆಗೆ ಬೋಧಿಸುವ ವ್ಯವಸ್ಥೆಯನ್ನು ೧೯೨೩-೨೪ರಲ್ಲಿ ಆರಂಭಿಸಲಾಯಿತು. ಮಾಧ್ಯಮಿಕ ಶಾಲೆಗಳಲ್ಲಿ ದೇಶಿಭಾಷೆ ಇಲ್ಲವೇ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲಾಗುತ್ತಿತ್ತು. ಸರ್ಕಾರವು ಹನ್ನೆರಡು ವರ್ಷದವರೆಗೆ ಮಕ್ಕಳು ಕಡ್ಡಾಯ ಶಿಕ್ಷಣ ಪಡೆಯಬೇಕೆಂಬ ನಿಯಮವನ್ನು ೧೯೪೭ರಲ್ಲಿ ಜಾರಿಗೊಳಿಸಿತು. ಇಷ್ಟೆಲ್ಲಾ ಬೆಳವಣಿಗೆಗಳ ನಡುವೆ ತಾಲೂಕಿನಲ್ಲಿ ೧೯೪೬ರ ವೇಳೆಗೆ ಆರು ಮಾಧ್ಯಮಿಕ ಶಾಲೆಗಳಿದ್ದವು. ಮುಂದೆ ೧೯೫೦ರಲ್ಲಿ ಕಡ್ಡಾಯ ಶಿಕ್ಷಣ ವಯೋಮಿತಿ ವಯಸ್ಸನ್ನು ೧೪ಕ್ಕೆ ಹೆಚ್ಚಿಸಲಾಯಿತು.

೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ತಾಲೂಕಿನ ಶಿಕ್ಷಣ ರಂಗದಲ್ಲಿ ಅನೇಕ ಗಣ್ಯರು ದುಡಿದಿದ್ದಾರೆ. ಅಂತಹವರಲ್ಲಿ ಒಬ್ಬರಾದ ತಲಕಾಡಿನ ಆರ್.ರಂಗೇಗೌಡರು ಮಳವಳ್ಳಿಯ ಆದಿಕರ್ನಾಟಕ ಪಾಠಶಾಲೆಗೆ ಶಿಕ್ಷಕರಾಗಿ ಸೇವೆ ಆರಂಭಿಸಿ, ೧೯೧೨ರವರೆಗೆ ಅಲ್ಲೇ ಹರಿಜನರ ಅಭ್ಯುದಯಕ್ಕಾಗಿ ದುಡಿದು ಜನಮನ್ನಣೆಗೆ ಸರ್ಕಾರದ ವಿಶ್ವಾಸಕ್ಕೆ ಪಾತ್ರರಾಗಿ, ಮುಂದೆ ಸಂಸ್ಥಾನದ ಸರ್ಕಾರ ೧೯೧೩ರಲ್ಲಿ ಪಂಚಮ ಬೋರ್ಡಿಂಗ್ ವಸತಿ ಶಾಲೆಯನ್ನು ಹರಿಜನ ವಿದ್ಯಾರ್ಥಿಗಳಿಗಾಗಿ ಮೈಸೂರಿನಲ್ಲಿ ಆರಂಭಿಸಿದಾಗ ರಂಗೇಗೌಡರನ್ನು ಅದರ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಲಾಯಿತು. ಅಲ್ಲೇ ಕೊನೆಯವರೆವಿಗೂ ಸೇವೆ ಸಲ್ಲಿಸಿ ೧೯೩೭ ರಲ್ಲಿ ಇವರು ನಿವೃತ್ತರಾದಾಗ, ಆ ವಸತಿ ಶಾಲೆಯಲ್ಲಿದ್ದ ಬಾಲಕರ ಸಂಖ್ಯೆ ೨೨೫ಕ್ಕೇರಿತ್ತು. ಹೀಗೆ ತಮ್ಮ ಪೂರ್ಣ ಸೇವಾವಧಿಯನ್ನು ಹರಿಜನ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮೀಸಲಾಗಿಟ್ಟಿದ್ದ ಅವರನ್ನು ಅವರ ಶಿಷ್ಯವರ್ಗವು ೧೯೩೭ರಲ್ಲಿ ಭಿನ್ನವತ್ತಳೆ ನೀಡಿ 'ಆದಿಕರ್ನಾಟಕದ ಪ್ರಥಮ ವಿದ್ಯಾಗುರು' ಎಂಬ ಬಿರುದನ್ನಿತ್ತು ಸನ್ಮಾನಿಸಿದ್ದು, ಮಹತ್ವದ ಅಂಶ.

**ಮೂಲಶಿಕ್ಷಣ :** ಸಂಸ್ಥಾನದಲ್ಲೂ ವಾರ್ಧಾ ಶಿಕ್ಷಣ ಸಮಿತಿಯು ೧೯೪೪ಕ್ಕೆ ಮೊದಲೇ ಮೈಸೂರು ಹಾಗೂ ಕೆಂಗೇರಿಗಳಲ್ಲಿ ಮೂಲ ಶಿಕ್ಷಣಕ್ಕಾಗಿ ಶ್ರಮಿಸುತ್ತಿದ್ದು, ಸಮಿತಿಯ ಸಲಹೆಯಂತೆ ೧೯೪೭ರ ನಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮೂಲ ಶಿಕ್ಷಣದಲ್ಲಿ ತರಬೇತಿ ನೀಡಿ, ತರಬೇತಾದ ಶಿಕ್ಷಕರು ದೊರೆತಂತೆ, ಅಂತಹ ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳೆಂದು ಪರಿವರ್ತಿಸಲಾಯಿತು. ಅದರಂತೆ ೧೯೫೬ರ ವೇಳೆಗೆ ತಾಲೂಕಿನಲ್ಲೂ ಕಿರಿಯ ಹಾಗೂ ಹಿರಿಯ ಮೂಲ ಶಿಕ್ಷಣ ಶಾಲೆಗಳು ಅಲ್ಲಲ್ಲಿ ತಲೆ ಎತ್ತಿದ್ದವು. ಪ್ರಾಥಮಿಕ ಶಿಕ್ಷಣವು ಮೂಲ ಶಿಕ್ಷಣದ ರೂಪದ್ದಾಗಿರಬೇಕೆಂಬ ಸರ್ಕಾರದ ಅಭಿಲಾಷೆಯಂತೆ ಕಿರಿಯ ಹಾಗೂ ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳನ್ನಾಗಿ ೧೯೬೬ರಲ್ಲಿ ಪರಿವರ್ತಿಸಲಾಯಿತು. ಆದರೆ ಕ್ರಮೇಣ ಮೂಲ ಶಿಕ್ಷಣ ಶಾಲೆಗಳ ಪಠ್ಯಕ್ರಮ ಪದ್ಧತಿಯು ಪ್ರಾಥಮಿಕ ಶಿಕ್ಷಣ ಸ್ವರೂಪವನ್ನು ಹೊಂದಿದ್ದರಿಂದ ೧೯೬೩ರ ವೇಳೆಗೆ ಮೂಲ ಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಶಾಲೆಗಳ ನಡುವಣ ವ್ಯತ್ಯಾಸ ಅಂತ್ಯಗೊಂಡು ಎಲ್ಲವೂ ಪ್ರಾಥಮಿಕ ಶಾಲೆಗಳಾದವು.



ತಾಲೂಕಿನಲ್ಲಿ ೧೯೭೩ರ ಮಾರ್ಚ್ ಅಂತ್ಯಕ್ಕೆ ೧೫೫ ಪ್ರಾಥಮಿಕ ಶಾಲೆ ಹಾಗೂ ೩೭ ಹಿರಿಯ ಪ್ರಾಥಮಿಕ ಶಾಲೆಗಳಿದ್ದವು. ೧೯೮೩ರ ಮಾರ್ಚ್ ಅಂತ್ಯಕ್ಕೆ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬರದಿದ್ದರೂ, ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೪೬ಕ್ಕೆ ಹೆಚ್ಚಳಗೊಂಡಿತು. ಅದೇ ೧೯೮೭ರ ಮಾರ್ಚ್ ಅಂತ್ಯಕ್ಕೆ ಈ ಸಂಖ್ಯೆ ೨೭೩ಕ್ಕೇರಿ (೨೧೨ ಕಿ.ಪ್ರಾ.ಶಾ ಹಾಗೂ ೬೧ ಹಿರಿಯ ಪ್ರಾಥಮಿಕ ಶಾಲೆ) ಅವುಗಳಲ್ಲಿ (೧೮,೧೭೦ ಬಾಲಕರು ಹಾಗೂ ೧೨,೯೯೭ ಬಾಲಕಿಯರು) ಒಟ್ಟು ೩೧,೧೬೭ ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದರು. ತಾಲೂಕಿನಲ್ಲಿ ೧೯೯೩ರ ಅಂತ್ಯಕ್ಕೆ ಇದ್ದ ೨೨೩ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೪೦೩೦೫ ಮಕ್ಕಳು ಶಿಕ್ಷಣ ಪಡೆಯುತ್ತಿದ್ದು, ೩೨೮ ಶಿಕ್ಷಕರು ಭೋಧಿಸುತ್ತಿದ್ದರು. ಪ್ರಾಥಮಿಕ ಶಾಲೆಗಳ ಸಂಖ್ಯೆ ೨೦೦೮-೦೯ರ ಸಾಲಿನಲ್ಲಿ ಇದು ೨೬೪ಕ್ಕೇರಿ ೧೬,೧೯೫ ಬಾಲಕರು ಹಾಗೂ ೧೫,೪೮೪ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

**ಉರ್ದು ಶಾಲೆಗಳು :** ತಾಲೂಕಿನ ನರಸೀಪುರ, ಎಡತೊರೆ, ಗರ್ಗೇಶ್ವರಿ, ಬನ್ನೂರು, ಮೂಗೂರು, ಸೋಸಲೆ, ಮುಂತಾದೆಡೆಗಳಲ್ಲಿ ಉರ್ದು ಶಾಲೆಗಳಿವೆ.

**ಟ್ರೈಮಿಸ್ಟರ್ ಪದ್ಧತಿ :** ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ೨೦೦೪ರ ಶಿಕ್ಷಣ ತಜ್ಞರ ಸಮಾವೇಶದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅದರಂತೆ ಅಧಿಕ ಪಠ್ಯಕ್ರಮ, ಅತಿಯಾದ ಪುಸ್ತಕಗಳ ಹೊರೆ ಹಾಗೂ ಪರೀಕ್ಷಾ ಭೀತಿಗಳಿಂದ ಮಕ್ಕಳನ್ನು ಮುಕ್ತಗೊಳಿಸುವ ಉದ್ದೇಶದಿಂದ ಈ ತ್ರೈಮಾಸಿಕ ಪದ್ಧತಿಯನ್ನು ೨೦೦೪-೦೫ರ ಶೈಕ್ಷಣಿಕ ವರ್ಷದಿಂದ ರಾಜ್ಯದಾದ್ಯಂತ ಜಾರಿಗೆ ತರಲಾಗಿದೆ. ಈ ಬದಲಾವಣೆಯಿಂದಾಗಿ ಹಿಂದೆ ನಡೆಸಲಾಗುತ್ತಿದ್ದ ಕಿರು, ಮಧ್ಯಂತರ ಹಾಗೂ ವಾರ್ಷಿಕ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಮೂರು ಮೂರು ತಿಂಗಳ (ಜುಲೈ-ಸೆಪ್ಟೆಂಬರ್; ಅಕ್ಟೋಬರ್-ಡಿಸೆಂಬರ್; ಜನವರಿ-ಮಾರ್ಚ್)ಅವಧಿಗೆ ಮಾತ್ರ ಪಾಠಪ್ರವಚನ, ಮೌಲ್ಯಮಾಪನಗಳು ನಡೆದು ಅಂಕಗಳಿಗೆ ಬದಲು ಶ್ರೇಣಿ ನೀಡುವ ಪದ್ಧತಿಯನ್ನು ಅಳವಡಿಸಲಾಗಿದೆ. ಮೇಲ್ಕಂಡ ಮೂರು ಅವಧಿಯ ಮೌಲ್ಯಮಾಪನವನ್ನು ಆಧರಿಸಿ ಮಕ್ಕಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲಾಗುತ್ತದೆ.

ಇಷ್ಟೆಲ್ಲಾ ಸುಧಾರಣೆಯ ನಡುವೆಯೂ ೬-೧೪ ವಯೋಮಿತಿಯ ಮಕ್ಕಳನ್ನು ಹಂತಹಂತವಾಗಿ ಶಾಲೆಗೆ ದಾಖಲು ಮಾಡಿಕೊಳ್ಳುವ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ೨೦೦೧-೦೨ರಲ್ಲಿ ಜಾರಿಗೊಳಿಸಲಾಗಿದೆ. ಅದಕ್ಕಾಗಿ ರಾಜ್ಯದಲ್ಲಿ ಗುರುತಿಸಲ್ಪಟ್ಟಿರುವ ೧೭೬೬ ಕೇಂದ್ರಗಳಲ್ಲಿ ಕೆಲವು ನರಸೀಪುರ ತಾಲೂಕಿನಲ್ಲೂ ಇದೆ. ಹೆಣ್ಣುಮಕ್ಕಳಿಗಿದ್ದ ಉಚಿತ ಶಿಕ್ಷಣ ವ್ಯವಸ್ಥೆಯನ್ನು (ಹಿಂದೆ ಜಾರಿಯಲ್ಲಿದ್ದ ೧-೪ನೇ ತರಗತಿಯವರೆಗೆ ಇತರೆ ಹೆಣ್ಣುಮಕ್ಕಳಿಗೆ, ೧-೭ನೇ ತರಗತಿವರೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳಿಗೆ ನೀಡುತ್ತಿದ್ದ ಉಚಿತ ಸಮವಸ್ತ್ರ ಪಠ್ಯಪುಸ್ತಕ, ಶುಲ್ಕ ವಿನಾಯ್ತಿ

ಸೌಲಭ್ಯ) ೧–೧೨ನೆಯ ತರಗತಿಯವರೆವಿಗೂ ವಿಸ್ತರಿಸಲಾಗಿದೆ. ಈ ಸೌಲಭ್ಯ ತಾಲೂಕಿನ ಹೆಣ್ಣುಮಕ್ಕಳಿಗೂ ಲಭಿಸುತ್ತಿದೆ. ನಂತರದಲ್ಲಿ ಟ್ರೈಮಿಸ್ಟರ್ ಪದ್ಧತಿಯನ್ನು ಹಿಂತೆಗೆದುಕೊಂಡು, ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

**ಅಕ್ಷರ ದಾಸೋಹ :** ಮಧ್ಯಾನ್ಹದ ಊಟ, ಸಂಸ್ಥಾನದ ಶಾಲೆಗಳಲ್ಲಿ ೧೯೪೬–೪೭ರಷ್ಟು ಹಿಂದೆಯೇ ೧–೧೦ನೇ ತರಗತಿಯವರೆಗಿನ ದುರ್ಬಲವರ್ಗದ ಮಕ್ಕಳಿಗೆ ಮಧ್ಯಾನ್ಹದ ಊಟ ನೀಡುವ ವ್ಯವಸ್ಥೆ ಇತ್ತು. ಮುಂದೆ ಇದು ಹೆಚ್ಚು ಸುಧಾರಣೆಯೊಂದಿಗೆ ವ್ಯಾಪಕವಾಗಿ ಬಳಕೆಗೆ ಬಂದಿದೆ. ಇದೇ ರೀತಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಐದನೆಯ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾನ್ಹದ ಊಟವನ್ನು ಶಾಲೆಯಲ್ಲೇ ಒದಗಿಸಲಾಗುತ್ತಿದೆ. ಈ ಯೋಜನೆ ಮುಖ್ಯ ಉದ್ದೇಶ ಹೆಚ್ಚು ಮಕ್ಕಳನ್ನು ಶಾಲೆಯತ್ತ ಸೆಳೆಯುವ ಮೂಲಕ ಮಕ್ಕಳ ಹಾಜರಾತಿಯನ್ನು ಸುಧಾರಿಸುವುದೇ ಆಗಿದ್ದು, ತಾಲೂಕಿನ ಶಾಲೆಗಳಲ್ಲೂ ಈ ಯೋಜನೆಯು ಅನುಷ್ಠಾನಗೊಂಡಿದೆ.

**ಶಿಕ್ಷಕ ತರಬೇತಿ ಶಾಲೆಗಳು :** ಹೋಬಳಿ ಶಾಲೆ ಯೋಜನೆಯು ಅನುಷ್ಠಾನಕ್ಕೆ ಬರುತ್ತಿದ್ದಂತೆ (೧೮೬೮) ತರಬೇತಿ ಹೊಂದಿದ ಶಿಕ್ಷಕರ ಅಗತ್ಯ ಅನಿವಾರ್ಯವಾಯಿತು. ಆರಂಭದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ಬೋಧನಾ ತರಬೇತಿಯನ್ನು ನೀಡಿ ಉಪಾಧ್ಯಾಯ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಎಲ್.ಎಸ್. (೭ನೇ ತರಗತಿ) ಹಾಗೂ ಪಂಡಿತ್ ಪರೀಕ್ಷೆ (೯ನೇ ತರಗತಿ) ಪಾಸಾದವರಿಗೆ ಕ್ರಮವಾಗಿ ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜುಗಳು ಬೋಧಕ ಹುದ್ದೆಯನ್ನು ನೀಡಲಾಗುತ್ತಿದ್ದು, ಎಲ್.ಎಸ್.ಪರೀಕ್ಷೆ ಬರೆಯಲೂ ಜಿಲ್ಲಾ ಕೇಂದ್ರಕ್ಕೆ ಹೋಗಬೇಕಾಗಿರುತ್ತಿತ್ತು. ಅನಂತರದಲ್ಲಿ ಶಿಕ್ಷಕರ ತರಬೇತಿ ಕೇಂದ್ರವು ಮೈಸೂರಿನಲ್ಲಿ ೧೮೯೬ರಲ್ಲಿ ಆರಂಭಗೊಂಡಿತು. ಮುಂದೆ ೧೯೧೪ರಲ್ಲಿ ಈ ನಾರ್ಮನ್ ತರಬೇತಿ ಶಾಲೆಯನ್ನು ತರಬೇತಿ ಕಾಲೇಜಾಗಿ ಉನ್ನತೀಕರಿಸಲಾಯಿತು. ಕ್ರಮೇಣ ಶಿಕ್ಷಕರಿಗೆ ತರಬೇತಿ ನೀಡುವ ಶಿಕ್ಷಣ ತರಬೇತಿ ಶಾಲೆ (ಟಿ.ಸಿ.ಎಚ್.)ಗಳು ಆರಂಭಗೊಂಡವು. ನಂತರದಲ್ಲಿ ಖಾಸಗೀಕರಣಕ್ಕೂ ಒಳಗಾಗಿವೆ. ಅದರಂತೆ ತಾಲೂಕು ಕೇಂದ್ರ ನರಸೀಪುರದಲ್ಲೂ ಶಿಕ್ಷಣ ತರಬೇತಿಯೂ ಸೇರಿದಂತೆ ವೃತ್ತಿ ಮತ್ತು ಶಿಕ್ಷಣ ಬೋಧನಾ ಕೇಂದ್ರವು ೧೯೮೬–೮೭ರ ಸಾಲಿನಲ್ಲಿ ಆರಂಭವಾಯಿತು. ೨೦೦೭–೦೮ರ ಸಾಲಿನಲ್ಲಿ ಬನ್ನೂರು, ನರಸೀಪುರ (೨), ಗರ್ಗೇಶ್ವರಿ ಹಾಗೂ ದೊಡ್ಡಬಾಗಿಲುಗಳಲ್ಲಿ ಡಿಪ್ಲೊಮ ಇನ್ ಎಜುಕೇಷನ್ (ಡಿ.ಎಡ್.) ಶಿಕ್ಷಕ ತರಬೇತಿ ಶಾಲೆಗಳಿವೆ.

**ಪ್ರೌಢಶಿಕ್ಷಣ:** ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ ಹಂತದ ನಂತರದ ಮೂರು ವರ್ಷಗಳ ಶಿಕ್ಷಣ ಹಂತವನ್ನು ಪ್ರಸ್ತುತ ಪ್ರೌಢ ಶಿಕ್ಷಣ ಹಂತವೆಂದು ಪರಿಗಣಿಸಲಾಗಿದೆ. ಅದರೆ ಹಿಂದೆ ಎಂಟು ವರ್ಷಗಳ ಪ್ರಾಥಮಿಕ (ಕಿರಿಯ ಹಾಗೂ ಹಿರಿಯ) ಶಿಕ್ಷಣ ಹಂತ ಹಾಗೂ ಒಂಭತ್ತರಿಂದ ೧೧ನೇ ತರಗತಿಯವರೆಗಿನ ಪ್ರೌಢಶಾಲಾ (ಮಾಧ್ಯಮಿಕ) ಹಂತ ಅಸ್ತಿತ್ವದಲ್ಲಿತ್ತು. ಆರಂಭದಲ್ಲಿ ಪ್ರೌಢಶಾಲೆಗಳು ಜಿಲ್ಲಾ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದ್ದು, ನರಸೀಪುರ ತಾಲೂಕಿನವರು ಪ್ರೌಢಶಿಕ್ಷಣಕ್ಕೆಂದು ಮೈಸೂರಿಗೆ



ಬರಬೇಕಿದ್ದು, (ಮಹಾರಾಜ ಹೈಸ್ಕೂಲ್ ೧೮೬೨) ೧೯೪೦ರಲ್ಲಿ ಪುರಸಭೆಗಳಿಗೆ ಪ್ರೌಢಶಾಲೆ ತೆರೆಯಲು ಅನುಮತಿ ದೊರೆತ ನಂತರ ಸುಮಾರು ೧೯೫೦ರಲ್ಲಿ ನರಸೀಪುರದಲ್ಲೂ ಪ್ರೌಢಶಾಲೆಯು ಆರಂಭವಾಯಿತು. ಪ್ರೌಢಶಾಲೆಗಳಲ್ಲಿ ೧೯೩೦ರವರೆಗೆ ಆಂಗ್ಲ ಭಾಷೆಯೇ ಬೋಧನ ಮಾಧ್ಯಮವಾಗಿತ್ತು. ಆ ವರ್ಷ ಕನ್ನಡ ಮಾಧ್ಯಮವನ್ನು ಆರಂಭಿಸಲಾಯಿತು. ಏಕೀಕರಣದ ನಂತರ ಪಠ್ಯಕ್ರಮದಲ್ಲಿ ಹಾಗೂ ಶಿಕ್ಷಣ ಶುಲ್ಕದಲ್ಲಿ ಏಕತೆಯನ್ನು ತರಲಾಯಿತು. ಪರಿಶಿಷ್ಟ ಜಾತಿ ಹಾಗೂ ಪಂಗಡದ ಬಡ ವಿದ್ಯಾರ್ಥಿಗಳಿಗೆ ಶುಲ್ಕ ಮನ್ನಾ ಮಾಡಲಾಯಿತು. ಏತನ್ಮಧ್ಯೆ ೧೯೬೪ರಲ್ಲಿ ಹನ್ನೊಂದನೆಯ ತರಗತಿಯನ್ನು ಪ್ರೌಢಶಾಲೆಗಳಲ್ಲೇ ಆರಂಭಿಸುವ ಮೂಲಕ ಅವನ್ನು ಉನ್ನತ ಪ್ರೌಢಶಾಲೆಗಳೆಂದು ಕರೆಯುವ ಮೂಲಕ ಗ್ರಾಮೀಣ ವಿದ್ಯಾರ್ಥಿಗಳಿಗೆ ಅಂತರ ಕಾಲೇಜ್ ಶಿಕ್ಷಣ ಸೌಲಭ್ಯವನ್ನೂ ಒದಗಿಸಲಾಯಿತು. ಇದು ೧೯೭೧ರವರೆಗೆ ಮುಂದುವರಿಯಿತು. ಆದರೆ ಆ ವರ್ಷ ದ್ವೈವಾರ್ಷಿಕ ಪದವಿ ಪೂರ್ವ ಶಿಕ್ಷಣವನ್ನು ಆರಂಭಿಸುವುದರೊಂದಿಗೆ, ಪ್ರೌಢಶಾಲಾ ಶಿಕ್ಷಣ ಮತ್ತೆ ಮೂರು ವರ್ಷಗಳಿಗೆ ಸೀಮಿತವಾದಂತಾಯಿತು. ತಾಲೂಕಿನಲ್ಲಿ ೧೯೭೪ರ ವೇಳೆಗೆ ಒಂಭತ್ತು ಪ್ರೌಢಶಾಲೆಗಳಿದ್ದು, ೧೯೭೮ರ ವೇಳೆಗೆ ಅದು ೨೧ಕ್ಕೇರಿ ೩೬೨ ಶಿಕ್ಷಕರು ಹಾಗೂ ೫,೫೮೫ ವಿದ್ಯಾರ್ಥಿಗಳಿದ್ದರು. ಇದು ೧೯೯೮ರ ವೇಳೆಗೆ ೩೬ಕ್ಕೇರಿ ೬,೭೨೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಅದೇ ೨೦೦೪ರ ಅಂತ್ಯಕ್ಕೆ ಪ್ರೌಢಶಾಲೆಗಳ ಸಂಖ್ಯೆ ೪೩ಕ್ಕೇರಿ ಅವುಗಳಲ್ಲಿ ೫೧೫೬ ಹುಡುಗರು ಹಾಗೂ ೫೫೧೯ ಹುಡುಗಿಯರು ವ್ಯಾಸಂಗ ಮಾಡುತ್ತಿದ್ದರು. ಇವುಗಳಲ್ಲಿ ೨೨ ಸರ್ಕಾರಿ ಶಾಲೆಗಳಾದರೆ ೭ ಅನುದಾನಿತ ಹಾಗೂ ೧೪ ಅನುದಾನರಹಿತ ಖಾಸಗಿ ಶಾಲೆಗಳಾಗಿವೆ. ೨೦೦೪ರ ಶಿಕ್ಷಣ ನೀತಿಯಂತೆ ೨೦೦೪–೦೫ರ ಶೈಕ್ಷಣಿಕ ಸಾಲಿನಿಂದ ಪ್ರೌಢಶಾಲೆಯ ಎಂಟು ಮತ್ತು ಒಂಭತ್ತನೆಯ ತರಗತಿಗಳಿಗೂ ಮೂರು ತಿಂಗಳ ಟ್ರೈಮಿಸ್ಟರ್ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತಾದರೂ ನಂತರದಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಲಾಗಿದೆ. ೨೦೦೮–೦೯ರ ಸಾಲಿನಲ್ಲಿ ತಾಲೂಕಿನಲ್ಲಿದ್ದ ೫೦ ಪ್ರೌಢಶಾಲೆಗಳಲ್ಲಿ ೫,೫೦೩ ವಿದ್ಯಾರ್ಥಿಗಳು ಹಾಗೂ ೫,೬೫೭ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಪ್ರೌಢಶಾಲೆಗಳಲ್ಲೂ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ.

**ಪದವಿಪೂರ್ವ ಶಿಕ್ಷಣ :** ರಾಜ್ಯ ಪುನಾರಚನೆ (೧೯೫೬)ಗೆ ಮೊದಲು ಇದ್ದ ಎರಡು ವರ್ಷದ ಇಂಟರ್ ಮೀಡಿಯಟ್ ಶಿಕ್ಷಣ ಪದ್ಧತಿಯು ೧೯೫೬–೫೭ರ ಸಾಲಿನಲ್ಲಿ ರದ್ದಾದಾಗ ಒಂದು ವರ್ಷದ ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯು ಜಾರಿಗೆ ಬಂದಿತು. ತಾಲೂಕಿನ ಆಯ್ದ ಪ್ರೌಢಶಾಲೆಗಳಲ್ಲಿ ಹನ್ನೊಂದನೆಯ ತರಗತಿಯನ್ನು ಆರಂಭಿಸಿ ಅವನ್ನು ಉನ್ನತ ಪ್ರೌಢಶಾಲೆಗಳೆಂದು ಕರೆಯಲಾಯಿತು. ಒಂದೇ ವರ್ಷದ ಪದವಿಪೂರ್ವ ಶಿಕ್ಷಣ ಪದ್ಧತಿಯನ್ನು ಕೆಲವೆಡೆ ಇಂಟರ್‌ಮೀಡಿಯಟ್ ಕಾಲೇಜುಗಳಲ್ಲಿ ಆರಂಭಿಸಿದರೆ, ಉಳಿದೆಡೆ ಪದವಿ ಕಾಲೇಜುಗಳಿಗೆ ಜೋಡಿಸಲಾಯಿತು. ಆದರೆ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ೧೦+೨+೩ ಮಾದರಿಯನ್ನು ಒಪ್ಪಿಕೊಳ್ಳುವ ಮೂಲಕ ೧೯೭೧–೭೨ರ ಸಾಲಿನಿಂದ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿದಂತೆ

ಎರಡು ವರ್ಷದ ಪದವಿ ಪೂರ್ವ ಶಿಕ್ಷಣವನ್ನು ಪುನರ್ ಆರಂಭಿಸಿ, ಪದವಿ ಪೂರ್ವ ಶಿಕ್ಷಣ ಮಂಡಳಿಯ (೧೯೭೦) ನಿಯಂತ್ರಣಕ್ಕೆ ಒಳಪಡಿಸಲಾಯಿತು. ಅದರಂತೆ ೧೯೭೪ರ ವೇಳೆಗೆ ತಾಲೂಕಿನ ಪದವಿ ಪೂರ್ವ ಕಾಲೇಜು ವಿದ್ಯೋದಯ ಆರಂಭಗೊಂಡಿತ್ತು. ಇದೇ ಪರಿಸ್ಥಿತಿ ೧೯೭೮ರಲ್ಲೂ ಇದ್ದು, ೧೯೮೩ರ ವೇಳೆಗೆ ಇದು ಎರಡಕ್ಕೇರಿತು. ಅದರಲ್ಲಿ ಒಂದು ಸರ್ಕಾರಿ ಕಾಲೇಜಾದರೆ, ಇನ್ನೊಂದು ಅನುದಾನಿತ ಖಾಸಗಿ ಕಾಲೇಜಾಗಿದ್ದು, ಎರಡೂ ತಾಲೂಕು ಕೇಂದ್ರದಲ್ಲೇ ಇದ್ದವು. ಇದು ೧೯೯೩ರ ವೇಳೆಗೆ ಮೂರಕ್ಕೇರಿ ೮೩೮ ವ್ಯಾಸಂಗಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರೆ, ಅದೇ ೧೯೯೮ರ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಆರು ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು ೬೫೧ ಶಿಕ್ಷಣಾರ್ಥಿಗಳಿದ್ದರು. ೨೦೦೩ರ ಅಂತ್ಯಕ್ಕೆ ಐದು ಸರ್ಕಾರಿ ಕಾಲೇಜು, ಒಂದು ಅನುದಾನಿತ ಹಾಗೂ ನಾಲ್ಕು ಅನುದಾನ ರಹಿತ ಪದವಿಪೂರ್ವ ಕಾಲೇಜುಗಳು ತಾಲೂಕಿನಲ್ಲಿದ್ದು, ಒಟ್ಟು ೧೮೦೮ ಶಿಕ್ಷಣಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ೨೦೦೪ರ ಮಾರ್ಚ್ ಅಂತ್ಯಕ್ಕೆ ಕಾಲೇಜುಗಳು ಅಷ್ಟೇ ಇದ್ದು, ವ್ಯಾಸಂಗಾರ್ಥಿಗಳ ಸಂಖ್ಯೆ ೧೯೯೩ಕ್ಕೇರಿತ್ತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೧೫ ಪದವಿಪೂರ್ವ ಕಾಲೇಜುಗಳಲ್ಲಿ ೨,೧೫೭ ವಿದ್ಯಾರ್ಥಿಗಳು ಹಾಗೂ ೨,೩೫೦ ವಿದ್ಯಾರ್ಥಿನಿಯರಿದ್ದರು.

**ಪದವಿ ಶಿಕ್ಷಣ :** ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ ಮೂರು ವರ್ಷಗಳ ಪದವಿ ಶಿಕ್ಷಣವನ್ನು ನೀಡುವ ಪ್ರಥಮ ದರ್ಜೆ ಕಾಲೇಜುಗಳು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಶೈಕ್ಷಣಿಕವಾಗಿ ಕಾರ್ಯನಿರ್ವಹಿಸುತ್ತವೆ. ಮೈಸೂರು ವಿಶ್ವವಿದ್ಯಾಲಯವು ಆರಂಭಗೊಂಡು (೧೯೧೬–೧೭) ಆರೂವರೆ ದಶಕಗಳ ನಂತರ ತಾಲೂಕು ಕೇಂದ್ರ ನರಸೀಪುರದಲ್ಲಿ ಪ್ರಥಮದರ್ಜೆ ಕಾಲೇಜು ಆರಂಭವಾಯಿತು. ಆದರೆ ಆವರೆಗೆ ತಾಲೂಕಿನ ವಿದ್ಯಾರ್ಥಿಗಳು ಪದವಿ ಶಿಕ್ಷಣ ಪಡೆಯಲು ಆರಂಭದಲ್ಲಿ ಮೈಸೂರಿಗೂ ಆನಂತರದಲ್ಲಿ ನಂಜನಗೂಡಿಗೂ ಹೋಗಬೇಕಾಗಿತ್ತು. ೧೯೮೦ರ ದಶಕದಲ್ಲಿ ತಾಲೂಕಿನ ವಿದ್ಯೋದಯ ಸಂಸ್ಥೆಯು ಪ್ರಥಮ ದರ್ಜೆ ಕಾಲೇಜನ್ನು ಆರಂಭಿಸುವುದರೊಂದಿಗೆ, ತಾಲೂಕಿನ ವಿದ್ಯಾರ್ಥಿಗಳಿಗೆ ತುಂಬ ಅನುಕೂಲವಾಯಿತು. ತತ್ಪರಿಣಾಮವಾಗಿ ೧೯೯೩ರ ವೇಳೆಗೆ ತಾಲೂಕಿನಲ್ಲಿದ್ದ ಏಕೈಕ ಪದವಿ ಕಾಲೇಜಿನಲ್ಲಿ ೪೧೮ ಶಿಕ್ಷಣಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಅದೇ ೧೯೯೭ರಲ್ಲಿ ಬನ್ನೂರಿನಲ್ಲೂ ಪದವಿ ಕಾಲೇಜು ಆರಂಭವಾಗುವುದರೊಂದಿಗೆ, ತಾಲೂಕಿನ ಎರಡು ಪದವಿ ಕಾಲೇಜುಗಳಲ್ಲಿ ಒಟ್ಟು ೪೧೧ ವ್ಯಾಸಂಗಾರ್ಥಿಗಳಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಎರಡು ಪದವಿ ಕಾಲೇಜುಗಳಲ್ಲಿ ಒಟ್ಟು ೭೦೫ (೩೮೦ ವಿದ್ಯಾರ್ಥಿಗಳು ಹಾಗೂ ೩೨೫ ವಿದ್ಯಾರ್ಥಿನಿಯರು) ವ್ಯಾಸಂಗಾರ್ಥಿಗಳಿದ್ದರು.

**ವಯಸ್ಕರ ಶಿಕ್ಷಣ:** ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ ಯೋಜನೆಯನ್ನು ಅಧಿಕೃತವಾಗಿ ೧೯೦೫ರಲ್ಲಿ ಆರಂಭಿಸಲಾಯಿತಾದರೂ ಅದರ ಆರಂಭವನ್ನು ೧೮೮೬–೮೭ರಷ್ಟು ಹಿಂದೆಯೇ ಮಹಾರಾಜ ಕಾಲೇಜಿನ ಸಹಾಯಕ ಶಿಕ್ಷಕರಾಗಿದ್ದ ಎಂ.ಶಾಮರಾಯರ ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳೊಂದಿಗೆ ಆರಂಭಿಸಿದ 'ರಾತ್ರಿ ಶಾಲೆ' ಪ್ರಯತ್ನದಲ್ಲಿ



ಕಾಣಬಹುದಾಗಿದೆ. ಇದು ೧೮೯೦ರ ವೇಳೆಗೆ ೧೭–೩೧ ವಯೋಮಿತಿಯ ೧೭೨ ವಿದ್ಯಾರ್ಥಿಗಳನ್ನು ಹೊಂದಿದ್ದು, ನಾಲ್ವರು ಶಿಕ್ಷಕರ ನೆರವಿನೊಂದಿಗೆ ನಾಲ್ಕು ತರಗತಿಗಳನ್ನು ನಡೆಸಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಮಾಸಿಕ ಒಂದಾಣೆ ಶುಲ್ಕವನ್ನು ವಿಧಿಸಲಾಗುತ್ತಿದ್ದು, ಸರ್ಕಾರವೂ ಸೇರಿದಂತೆ ವಿವಿಧ ಮೂಲಗಳಿಂದ ಆರ್ಥಿಕ ನೆರವು ದೊರೆಯುತ್ತಿತ್ತು. ಮುಂದೆ ೧೯೦೫ರಲ್ಲಿ ವಯಸ್ಕರ ಶಿಕ್ಷಣವು ವ್ಯವಸ್ಥಿತ ಸ್ವರೂಪವನ್ನು ಪಡೆದರೂ ಅದಕ್ಕೆ ಸರ್ಕಾರದ ಮಾನ್ಯತೆ ಲಭಿಸಿದ್ದು, ೧೯೧೦ರಲ್ಲಿ. ಹದಿನೈದು ವರ್ಷ ವಯೋಮಿತಿ ದಾಟದವರು ಹಗಲು ಶಾಲೆಗೆ ಹೋಗಲಾಗದಂತಹವರಿಗೆ ರಾತ್ರಿ ಶಾಲೆಯನ್ನು ಪ್ರಾಥಮಿಕ ಶಾಲಾ ಶಿಕ್ಷಕರು ಸ್ಥಳೀಯ ಪ್ರಾಥಮಿಕ ಶಾಲೆಗಳಲ್ಲೇ ನಡೆಸುತ್ತಿದ್ದರು. ಇಲ್ಲಿ ನಡೆಸುತ್ತಿದ್ದ ಎರಡು ತರಗತಿಗಳಲ್ಲಿ ಒಂದು ತರಗತಿಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಿದರೆ, ಇನ್ನೊಂದರಲ್ಲಿ ಉನ್ನತ ತರಗತಿಯ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಇದಕ್ಕೆ ಸರ್ಕಾರದಿಂದ ಉತ್ತೇಜನ ದೊರೆತರೂ, ೧೯೧೩ರಲ್ಲಿ ನಾನಾಕಾರಣಗಳಿಂದ ಇಂತಹ ಅರ್ಧಕ್ಕೂ ಹೆಚ್ಚು ರಾತ್ರಿ ಶಾಲೆಗಳು ಮುಚ್ಚಲ್ಪಟ್ಟವು. ಆದರೆ ಮೈಸೂರು ವಿಶ್ವವಿದ್ಯಾಲಯ ಹಾಗೂ ಪುರಸಭೆಗಳ ಒತ್ತಾಸೆಯಿಂದ ೧೯೪೧ರಲ್ಲಿ ಮೈಸೂರು ರಾಜ್ಯ ಸಾಕ್ಷರತಾ ಸಮಿತಿಯು ಆರಂಭಗೊಂಡು ಬಿ.ಎಂ.ಶ್ರೀ ಅವರನ್ನು ಅದರ ಪ್ರಥಮ ಅಧ್ಯಕ್ಷರನ್ನಾಗಿ ಮಾಡಲಾಯಿತು. ಮುಂದೆ ೧೯೪೫ರಲ್ಲಿ ಅದರ ಹೆಸರನ್ನು ವಯಸ್ಕರ ಶಿಕ್ಷಣ ಸಮಿತಿ ಎಂದು ಮಾರ್ಪಡಿಸಿ, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಯಸ್ಕರ ಶಿಕ್ಷಣಕ್ಕೆ ಇಂಬು ನೀಡಲಾಯಿತು. ಏತನ್ಮಧ್ಯೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಪೂರಕವಾಗಿ ರಾಜ್ಯ ವಯಸ್ಕರ ಇಲಾಖೆಯನ್ನು ೧೯೭೮ರಲ್ಲಿ ಆರಂಭಿಸಿತು. ಜಿಲ್ಲೆಗೊಂದರಂತೆ ಇರುವ ವಯಸ್ಕರ ಶಿಕ್ಷಣ ಸಮಿತಿಗೆ ಆಯಾ ಜಿಲ್ಲಾಧಿಕಾರಿಗಳೇ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ೧೫–೪೫ ವಯೋಮಿತಿ ಅನಕ್ಷರಸ್ಥರಿಗೆ ಓದು, ಪುನರಾವರ್ತಿಸು ಹಾಗೂ ಉಚ್ಚರಿಸು, ಸೇರಿದಂತೆ ಪ್ರಾಥಮಿಕ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ದೈನಂದಿನ ವ್ಯವಹಾರದಲ್ಲಿ ಸ್ವಾವಲಂಬಿಗಳನ್ನಾಗಿ ಮಾಡುವುದೇ ಈ ಯೋಜನೆಯ ಉದ್ದೇಶವಾಗಿತ್ತು. ಅದರಂತೆ ಈ ಸಮಿತಿಯು ಆರಂಭಿಸಿದ ವಿದ್ಯಾಪೀಠ (ಆಶ್ರಮ ಶಾಲೆ) ಯೋಜನೆಯು ವಿಶಿಷ್ಟವಾಗಿದ್ದು, ಗ್ರಾಮೀಣ ಯುವಪೀಳಿಗೆಗೆ ಸಾಂಸ್ಕೃತಿಕ ಶಿಕ್ಷಣವನ್ನೂ ಗ್ರಾಮೀಣ ಹಿನ್ನೆಲೆಯಲ್ಲಿ ನೀಡುವುದಾಗಿದ್ದು, ನೆರೆಯ ನಂಜನಗೂಡಿನ ವಿದ್ಯಾಪೀಠವು ೧೯೪೭ರಲ್ಲಿ ವಿದ್ಯಾರ್ಥಿನಿಯರಿಗೆಂದೇ ಆರಂಭವಾಯಿತು.

ತಾಲೂಕಿನಲ್ಲೂ ವಯಸ್ಕರ ಶಿಕ್ಷಣಕ್ಕಾಗಿ ಆರಂಭದಿಂದಲೂ ಸಾಕಷ್ಟು ಕ್ರಮಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದ್ದು, ೧೯೮೪–೮೫ರ ಸಾಲಿನಲ್ಲಿ ತಾಲೂಕಿನಲ್ಲಿ ಇದ್ದ ೩೦ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಒಟ್ಟು ೪೮೭ ವಯಸ್ಕರು (೩೯೭ ಪುರುಷರು ಹಾಗೂ ೯೦ ಮಹಿಳೆಯರು) ಶಿಕ್ಷಣ ಪಡೆಯುತ್ತಿದ್ದರು. ಅದರಲ್ಲಿ ೩೫೬ (೨೮೨ ಪುರುಷರು + ೭೭ ಮಹಿಳೆಯರು) ವಯಸ್ಕರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರು. ಈ ಕೇಂದ್ರಗಳಲ್ಲಿ ೧೯೮೭ ರ ವೇಳೆಗೆ ೬೧೮ ವಯಸ್ಕರು ಶಿಕ್ಷಣ ಪಡೆಯುತ್ತಿದ್ದರು. ತಾಲೂಕಿನಲ್ಲಿ ೧೯೯೦ರ ವೇಳೆಗೆ ಇದ್ದ ೫೫ ಕೇಂದ್ರಗಳಿಂದ ೧೬೫೦ ಮಂದಿ

ಶಿಕ್ಷಣದ ಲಾಭ ಪಡೆದಿದ್ದರು. ಈ ಯೋಜನೆಗೆ ಪೂರಕವಾಗಿ ರಾಜ್ಯದಲ್ಲಿ ಜಾರಿಗೆ ಬಂದ ಅಕ್ಷರಸೇನಾ ಕಾರ್ಯಕ್ರಮ (೧೯೯೩–೯೭)ದ ಜೊತೆಗೆ ೧೯೮೯ರಲ್ಲಿ ಸಾಮೂಹಿಕ ಸಾಕ್ಷರತಾ ಆಂದೋಲನವನ್ನು ಪ್ರಯೋಗಾರ್ಥವಾಗಿ ಆಯ್ದ ತಾಲೂಕುಗಳಲ್ಲಿ ಆರಂಭಿಸಲಾಯಿತು. ಆನಂತರದಲ್ಲಿ ರಾಜ್ಯದ ಎಲ್ಲಾ ತಾಲೂಕಿಗಳಿಗೂ ಇದನ್ನು ವಿಸ್ತರಿಸಲಾಯಿತು. ಸಾಕ್ಷರತಾ ಆಂದೋಲನವನ್ನು ೧) ೧೮ ತಿಂಗಳ ಸಂಪೂರ್ಣ ಸಾಕ್ಷರತಾ ಆಂದೋಲನ ೨) ೧೨ ತಿಂಗಳ ಸಾಕ್ಷರೋತ್ತರ ಕಾರ್ಯಕ್ರಮ ಹಾಗೂ ೩) ನಿರಂತರ ಶಿಕ್ಷಣ ಕಾಯಕ್ರಮ ಹಂತಗಳ ಮೂಲಕ ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಅದರಂತೆ ತಾಲೂಕಿನಲ್ಲಿ ಮೊದಲ ಎರಡು ಹಂತದ ಸಾಕ್ಷರತಾ ಆಂದೋಲನಗಳು ಪೂರ್ಣಗೊಂಡು ಈಗ ನಿರಂತರ ಶಿಕ್ಷಣ ಕಾರ್ಯಕ್ರಮ ಪ್ರಗತಿಯಲ್ಲಿದೆ. ಅದರಂತೆ ಪ್ರತೀ ೨೦೦೦ ಜನಸಂಖ್ಯೆಗೊಂದರಂತೆ ಜನಶಿಕ್ಷಣ ಕೇಂದ್ರಗಳನ್ನು ಆರಂಭಿಸಿ ಗ್ರಂಥಾಲಯ, ಚರ್ಚೆ, ಅಭಿವೃದ್ಧಿ ಮನರಂಜನೆ ಮುಂತಾದ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ.

**ಹಿಂದಿ ಶಿಕ್ಷಣ :** ಸಂಸ್ಥಾನದಲ್ಲಿ ಹಿಂದಿ ಶಿಕ್ಷಣದ ಆರಂಭವನ್ನು ೧೯೨೦ರಷ್ಟು ಹಿಂದೆಯೇ ನೋಡಬಹುದಾಗಿದ್ದು, (ಮೈಸೂರು ನಗರ) ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಕರ್ನಾಟಕ ಹಿಂದಿ ಪ್ರಚಾರ ಸಮಿತಿ, ಮೈಸೂರು ಹಿಂದಿ ಪ್ರಚಾರ ಸಮಿತಿ ಹಾಗೂ ಕರ್ನಾಟಕ ಮಹಿಳಾ ಸೇವಾ ಸಮಿತಿ (೧೯೫೪) ಹಿಂದಿ ಶಿಕ್ಷಣ ಪ್ರಚಾರಕ್ಕಾಗಿ ಜಿಲ್ಲೆಯಲ್ಲಿ ದುಡಿಯುತ್ತಿವೆ. ಅವುಗಳಲ್ಲಿ ಕರ್ನಾಟಕ ಮಹಿಳಾ ಸೇವಾ ಸಮಿತಿಯ ಸೇವಾಕೇಂದ್ರವು ನರಸೀಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸುಬೋಧ, ಪ್ರಥಮ, ಮಾಧ್ಯಮ, ಉತ್ತಮ, ಭಾಷಾ ಭೂಷಣ (ಭಾಗ ೧ ಮತ್ತು ೨) ಹಾಗೂ ಭಾಷಾ ಪ್ರವೀಣ ಪದವಿಗಾಗಿ ಪರೀಕ್ಷೆಗಳನ್ನು ನಡೆಸುತ್ತಿದೆ.

ಎನ್.ಸಿ.ಸಿ. ಸ್ಕೌಟ್ಸ್ ಸೇವಾದಳ ಹಾಗೂ ಎನ್.ಎಸ್.ಎಸ್. ಯೋಜನೆಗಳು ತಾಲೂಕಿನ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳಲ್ಲಿ ಕಾರ್ಯಮಗ್ನವಾಗಿವೆ.

**ಗ್ರಂಥಾಲಯಗಳು :** ಅಗ್ರಹಾರಗಳು ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಾಗಿದ್ದು, ಖಾಸಗಿ ತಾಳೆಗರಿ ಸಂಗ್ರಹಗಳು ಇದ್ದುದಕ್ಕೆ ಪುರಾವೆಗಳಿವೆ. ಇಂದಿಗೂ ಬ್ರಾಹ್ಮಣ ವಂಶಸ್ಥರಲ್ಲಿ ತಾಳೆಗರಿ ಹಸ್ತಪ್ರತಿಗಳು ಲಭ್ಯವಿದೆ. ಸೋಸಲೆ, ಮುಡುಕುತೊರೆ, ತಲಕಾಡು, ಮುಂತಾದೆಡೆ ಇರುವ ವೀರಶೈವ ಮಠ ಹಾಗೂ ತಿರುಮಕೂಡ್ಲಿನ ವ್ಯಾಸರಾಜ ಮಠಗಳಲ್ಲಿ ತಾಳೆಗರಿ ಹಸ್ತಪ್ರತಿಗಳು ಕ್ವಚಿತ್ತಾಗಿ ಉಳಿದು ಬಂದಿದ್ದು, ಗ್ರಾಮದ ಶಾಲೆಗಳಲ್ಲಿರುತ್ತಿದ್ದ ಗ್ರಾಮೀಣ ಗ್ರಂಥಾಲಯಗಳನ್ನು ಗ್ರಾಮಪಂಚಾಯಿತಿಗಳು ನಿರ್ವಹಿಸುತ್ತಿದ್ದುದ್ದನ್ನು ೧೯೨೧ರಷ್ಟು ಹಿಂದಕ್ಕೆ ಸಂಸ್ಥಾನದಲ್ಲಿ ಗುರುತಿಸಬಹುದಾಗಿದೆ. ತಾಲೂಕಿನಲ್ಲಿ ೧೯೯೭ರ ಅಂತ್ಯಕ್ಕೆ ಐದು ಗ್ರಂಥಾಲಯಗಳಿದ್ದು, ೧೯೯೯ರ ಅಂತ್ಯಕ್ಕೆ ಇವು ೧೦ಕ್ಕೇರಿದವು. ಅದೇ ೨೦೦೯ರ ಅಂತ್ಯಕ್ಕೆ ಇವುಗಳ ಸಂಖ್ಯೆ ೩೯ಕ್ಕೇರಿತ್ತು.



## ಕ್ರೀಡೆ

ದೈಹಿಕ ಆರೋಗ್ಯ ರಕ್ಷಣೆಗೆ, ಸ್ಪರ್ಧಾತ್ಮಕ ಮನೋಭಾವದ ವೃದ್ಧಿಗೆ, ಮನರಂಜನೆಗೆ ಹಾಗೂ ಸಮುದಾಯ ಬದುಕಿಗೆ ಕ್ರೀಡೆ ಅತ್ಯಗತ್ಯ. ಗ್ರಾಮೀಣ ಜೀವನದಲ್ಲಿ ದೊಣ್ಣೆ ವರಸೆ, ಕುಸ್ತಿ, ಮಲ್ಲಕಂಬ; ಚೌಕಾಬಾರ, ಪಗಡೆ, ಅಳುಗುಳಿಮಣೆ, ಹಾವು–ಏಣಿ, ಹುಲಿ–ಕುರಿ ಆಟ, ಕಲ್ಲು–ಮಣ್ಣಾಟ, ಕಣ್ಣಾಮುಚ್ಚಾಲೆ, ಕುಂಟಾಬಿಲ್ಲೆ, ಹಗ್ಗದಾಟ, ಅಪ್ಪಾಳೆ–ಚಪ್ಪಾಳೆ, ಜೂಟಾಟ, ಮರಕೋತಿ, ಲಗೋರಿ, ಕೋಲಾಟ, ಚಿನ್ನಿದಾಂಡು, ಕಬಡ್ಡಿ, ಗೋಲಿ, ಬುಗುರಿ, ದುಬ್ಬಚೆಂಡು, ಚೆಂಡಾಟ ಮುಂತಾದ ಜನಪದೀಯ ಆಟಗಳು ಬಹುಹಿಂದಿನಿಂದಲೂ ರೂಢಿಯಲ್ಲಿವೆ. ತಾಲೂಕಿನಲ್ಲಿರುವ ಗರಡಿ ಮನೆಗಳು ಉಲ್ಲೇಖಾರ್ಹವಾಗಿವೆ. ಆದರಿಂದು ಇವುಗಳಲ್ಲಿ ಹೆಚ್ಚಿನವು ಜನಾದರ ಕಳೆದುಕೊಂಡು ಕಣ್ಮರೆಯಾಗುತ್ತಿವೆ. ಅವುಗಳ ಸ್ಥಾನದಲ್ಲಿ ಜಿಮ್ನಾಸಿಯಂಗಳು ಕಾಣಿಸಿಕೊಳ್ಳಲಾರಂಭಿಸಿವೆ. ಆದರೆ ಕ್ರಿಕೆಟ್, ಫುಟ್‌ಬಾಲ್, ಟೆನ್ನಿಕಾಯಿಟ್, ಕಬಡ್ಡಿ, ಖೋಖೋ ಮುಂತಾದ ಆಧುನಿಕ ಆಟಗಳು ಜನಪ್ರಿಯವಾಗಿದ್ದು, ಕ್ರಿಕೆಟ್ ಸನ್ನಿಗೆ ಗ್ರಾಮೀಣರೂ ಬಲಿಯಾಗಿದ್ದಾರೆ. ರೋಟರಿ, ಲಯನ್ಸ್ ಕ್ಲಬ್ಬುಗಳು ಯುವಕ–ಯುವತಿಯರ ಸಂಘ, ಮಹಿಳಾ ಮಂಡಲಿ ಮುಂತಾದವು ವಿವಿಧ ಕ್ರೀಡಾಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಡೆಸುತ್ತಿದ್ದು, ಈ ಸಲುವಾಗಿಯೇ ಜಿಲ್ಲಾ ಮಟ್ಟದಲ್ಲಿ ೧೯೭೫ರಲ್ಲಿ ಆರಂಭಗೊಂಡ ಜಿಲ್ಲಾ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಗೆ ತಾಲೂಕು ಮಟ್ಟದಲ್ಲಿ ಸಹಾಯಕ ಯುವಜನಸೇವಾ ಕ್ರೀಡಾಧಿಕಾರಿಗಳನ್ನು ೧೯೭೬ರಿಂದ ನೇಮಿಸಲಾಗುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯ ನಿಯಂತ್ರಣಕ್ಕೆ ಇವರು ಒಳಪಟ್ಟಿರುತ್ತಾರೆ. ಕೇಂದ್ರೀಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಡಿ ಕಾರ್ಯ ನಿರ್ವಹಿಸುವ ನೆಹರು ಯುವಕೇಂದ್ರವು ಯುವಕ, ಯುವತಿ ಹಾಗೂ ಮಹಿಳಾ ಮಂಡಳಿಗಳನ್ನು ಗ್ರಾಮೀಣ ಮಟ್ಟದಲ್ಲಿ ಸ್ಥಾಪಿಸಲು ನೆರವು ನೀಡುವ ಮೂಲಕ ಕ್ರೀಡಾಭಿವೃದ್ಧಿಗೆ ಕೈಜೋಡಿಸುತ್ತಿದ್ದು, ಇದಕ್ಕೆ ರಾಜ್ಯ ಸರ್ಕಾರದ ಯುವಜನಸೇವೆ ಹಾಗೂ ಕ್ರೀಡಾ ಇಲಾಖೆಯು ಆರ್ಥಿಕ ನೆರವು ನೀಡುತ್ತದೆ. ಸೋಮನಾಥಪುರದ ಬಿ.ವಿಜಯಕೃಷ್ಣ, ಕ್ರಿಕೆಟ್‌ರಂಗದ ಸರ್ವಾಂಗೀಣ(ಆಲ್‌ರೌಂಡ್) ಆಟಗಾರರಾಗಿದ್ದು, ರಾಜ್ಯ ರಣಜಿ ತಂಡ ಹಾಗೂ ರಾಷ್ಟ್ರೀಯ ತಂಡಗಳನ್ನು ಪ್ರತಿನಿಧಿಸಿದ್ದ ಅಪೂರ್ವ ಪ್ರತಿಭೆ. ಸೋಸಲೆ ಮಹಾದೇವ, ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿರುವ ಖ್ಯಾತ ಓಟಗಾರರಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾಪ್ರತಿಭೆಗಳು ಹೊರಹೊಮ್ಮಲು ಪೂರಕ ಸನ್ನಿವೇಶ ನಿರ್ಮಾಣಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.